ನಿಗಧಿಯಾದಂತಹ ಈ ದಿವಸವನ್ನು ಆ ಕಲಾಪವನ್ನು ಬೇರೆ ಕಲಾಪಕ್ಕಾಗಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇದರಲ್ಲಿ Even the chair or the House can not take away the rights of the members.

ಉಪಾಧ್ಯಕ್ಷರು : ತಾವು ಗಮನಿಸಬೇಕು. ಇದರಲ್ಲಿ ಛೇರ್‌ಆಗಲಿ, ಅಥವಾ ಹೌಸ್ ಆಗಲಿ ನಿಮ್ಮ ರೈಟ್ಸ್ ಯಾವುದನ್ನೂ ತೆಗೆದುಕೊಳ್ಳುವುದಕ್ಕೆ ಹೋಗುತ್ತಿಲ್ಲ. ಇದು ವಿತ್ತೀಯ ಕಲಾಪ ಆದಮೇಲೆ ಮುಂದೆ ತೆಗೆದುಕೊಳ್ಳುತ್ತಿರುವುದು ಇದನ್ನು ಕೊನೆಯಲ್ಲಿ ತೆಗೆದುಕೊಂಡು ನಿಮಗೆ ಕಾಲವಕಾಶ ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿನ್ನೆ ದಿವಸ ಚರ್ಚೆಯಾದದ್ದು ಇದು ಕ್ಲಿಯರ್ ಅಂಡರ್‌ಸ್ಟಾಡಿಂಗ್ ಇವತ್ತು 12 ಗಂಟೆಗೆ ಸಭೆ ಸೇರತಕ್ಕಂಥಾದ್ದು ಮತ್ತು ಈ ಚರ್ಚೆಯನ್ನು ಮುಗಿಸಿ ಖಾಸಗಿ ನಿರ್ಣಯವನ್ನು ಕೈಗೊಳ್ಳುವುದು. ತಮಗೆ ಗೊತ್ತಿಲ್ಲ with clear understanding the Leader of the Opposition and other Leaders have agreed to.. ಹೇಳದೇ ಕೇಳದೆ ಡಿಮ್ಯಾಂಡ್ಸ್ ತೆಗೆದುಕೊಂಡರೆ ಹೇಗೆ none of us are ready to discuss on any one of the demands...

ಶ್ರೀ ಆರ್.ವಿ. ದೇಶಪಾಂಡೆ : ಈ ಬಿಸಿನೆಸ್ ಅಡ್ವೈಸರಿಯಲ್ಲಿ ಏನು ಡಿಸ್‌ಕಷನ್ ಆಗಿತ್ತು ಎಂದರೆ ನೀವು ಇವತ್ತು ಡಿಮ್ಯಾಂಡ್ ತೆಗೆದುಕೊಳ್ಳುತ್ತೀವೆ ಎಂದು ಹೇಳಿದಿರಿ ಅದಕ್ಕೆ ನಾನು ಹೇಳಿದೆ ಅದು ಇಷ್ಟು ಬೇಗ ಸಾಧ್ಯವಾಗುವುದಿಲ್ಲ. ಏಕೆಂದರೆ ಈದ್ಗಾ ಫ್ಲಡ್ಸ್ ಸಮಸ್ಯೆಗಳು ಇದ್ದು ಅದನ್ನು ಚರ್ಚೆ ಮಾಡಬೇಕು ಎಂದು ಹೇಳಿದಾಗ ಮಾನ್ಯ ಚಂದ್ರೇಗೌಡರು ಒಂದು ಸಲಹೆ ಮಾಡಿದರು. ಬೇಕಾದರೆ ಸರ್ಕಾರದವರು ಒಂದು ಸ್ಟೇಟ್‌ಮೆಂಟ್ ಮಾಡಲಿ.

ಅವರು ಸ್ಟೇಟ್‌ಮೆಂಟ್ ಮಾಡುವುದಿದ್ದರೆ ಸ್ಟೇಟ್‌ಮೆಂಟ್ ಮಾಡಲಿ ಅದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಸಾಧ್ಯ ಇದೆ. ತಾವು ಹೇಳಿದ ಹಾಗೆ ಇವತ್ತು ಶುಕ್ರವಾರ ಇವತ್ತು ನಾವು ಇರುವುದು 5 ಜನ. ಏನು ನಿರ್ಣಯಗಳು ಇದೆ ಅದರ ಬಗ್ಗೆ ಕಾಯ್ದಿಟ್ಟ ದಿನ ಇದು. ಬೇರೆ ದಿನವನ್ನು ಇಡುವುದಕ್ಕಾಗುವುದಲ್ಲ ಹಾಗಾಗಿ ಇವತ್ತು ನಮಗೆ ಕಾರ್ಯಕಲಾಪಗಳಲ್ಲಿ ಅಡ್ಡಿ ಬರುವ ಇಚ್ಛೆ ಇಲ್ಲ. ನಾನು ತಮಗೆ ಏನು ವಿನಂತಿ ಮಾಡುತ್ತೇನೆ ಅಂದರೆ ಬೇಕಾದರೆ ಅವರ ಸಪ್ಲಿಮೆಂಟರಿ ಎಸ್ಟಿಮೇಟನ್ನು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ನಾವು ಯಾವ ಡಿಮ್ಯಾಂಡ್ ಮೇಲೂ ರೆಡಿಯಾಗಿ ಬಂದಿಲ್ಲ ಇವತ್ತು ಡಿಮ್ಯಾಂಡ್ ಬರುತ್ತದೆ ಎಂದು ಗೊತ್ತಿಲ್ಲ. ಹಾಗಾಗಿ ಮೊದಲು ತಾವು ಖಾಸಗಿ ಸದಸ್ಯರ ಡಿಮ್ಯಾಂಡ್ ಏನಿದೆ ಅದನ್ನು ತೆಗೆದುಕೊಳ್ಳಿ ಅದಾದನಂತರ ಬೇಕಾದರೆ ತಾವು ಬೇರೆ ವಿಚಾರವನ್ನು ತೆಗೆದುಕೊಳ್ಳಿ.

ಮಂತ್ರಿಗಳಿಂದ ಹೇಳಿಕೆ

ರಾಜ್ಯದಲ್ಲಿನ 1994ರ ಜೂನ್-ಜುಲೈ ತಿಂಗಳಿನ ಭಾರಿ ಮಳೆ ಪ್ರವಾಹ ಹಾಗೂ ಕೆಲವು ಭಾಗಗಳ ಬರ ಪರಿಸ್ಥಿತಿ ವಿಚಾರಗಳ ಬಗ್ಗೆ

+ ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : ಮಾನ್ಯ. ಉಪಾಧ್ಯಕ್ಷರೆ..

ಪ್ರಸ್ತುತ ದಶಕದಲ್ಲಿ ಸತತವಾಗಿ 4ನೇ ವರ್ಷ ಪ್ರಕೃತಿಯು ಕರ್ನಾಟಕದ ಮೇಲೆ ಮುನಿಸು ತೋರಿದೆ. ರಾಜ್ಯವು ಪ್ರವಾಹ ಹಾಗೂ ಬರ ಪರಿಸ್ಥಿತಿಯನ್ನು ಒಮ್ಮೆಗೆ ಎದುರಿಸುತ್ತಿದೆ.

1. ಜೂನ್ - ಜುಲೈ, 1994ರ ಭಾರಿ ಮಳೆ ಮತ್ತು ಪ್ರವಾಹ :

ಮುಂಗಾರು ಮಳೆಯು ಪ್ರಸ್ತುತ ವರ್ಷ ಸಕಾಲದಲ್ಲಿ ಪ್ರಾರಂಭವಾಯಿತು. ಆದರೆ, ಇದು ಅಸಮರ್ಪಕವಾಗಿತ್ತು. ಕರಾವಳಿ ಮತ್ತು ಪಶ್ಚಿಮ ಘಟ್ಟದ ಜಿಲ್ಲೆಗಳಲ್ಲಿ ಮಳೆಯು

ಅತ್ಯುಪ್ರವಾಗಿತ್ತು. ದಕ್ಷಿಣ ಒಳನಾಡಿನ ಕೆಲವು ಭಾಗಗಳಲ್ಲಿ ಮತ್ತು ಉತ್ತರ ಒಳನಾಡಿನಲ್ಲಿ ಮಳೆ ಕಡಿಮೆಯಾಗಿತ್ತು.

1994ರ ಆಗಸ್ಟ್ 24ರವರೆಗೆ, ರಾಜ್ಯದ 10ಜಿಲ್ಲೆಗಳಾದ ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಕೋಲಾರ, ಮೈಸೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ತೀವ್ರ ತೊಂದರೆ ಉಂಟಾಗಿದ್ದರೆ, ಉಳಿದ 6 ಜಿಲ್ಲೆಗಳಲ್ಲಿ ಬಳ್ಳಾರಿ, ಬಿಜಾಪುರ, ಚಿತ್ರದುರ್ಗ, ಗುಲ್ಬರ್ಗಾ, ಮಂಡ್ಯ ಮತ್ತು ರಾಯಚೂರು ಮೇಲ್ಭಾಗದ ಅಣೆಕಟ್ಟುಗಳಿಂದ ಹೊರಬಿಟ್ಟ ನೀರಿನಿಂದ ತೊಂದರೆಯುಂಟಾಯಿತು.

1994ರ ಆಗಸ್ಟ್ 12ರ ವರೆಗೆ, ರಾಜ್ಯದಲ್ಲಿ ಮುಂಗಾರು ಮಳೆ 71 ಮಾನವ ಪ್ರಾಣಗಳನ್ನು ಹಾಗೂ 2768 ಜಾನುವಾರುಗಳನ್ನು ಬಲಿ ತೆಗೆದುಕೊಂಡಿರುತ್ತದೆ. ತೊಂಭತ್ತೆರೆಡು ಮಂದಿ ಗಾಯಗೊಂಡಿರುತ್ತಾರೆ, 4124 ಮನೆಗಳು ಪೂರ್ಣವಾಗಿ ಮತ್ತು 37874 ಮನೆಗಳು ಭಾಗಶಃ ಹಾನಿಯಾಗಿವೆ, 2695 ನೀರಾವರಿ ಪಂಪ್‌ಸೆಟ್ಟುಗಳು ಮತ್ತು 124 ನೀರಾವರಿ ಭಾವಿಗಳು ಹಾನಿಗೊಂಡಿವೆ, 1,57,482 ಹೆಕ್ಟೇರ್ ಪ್ರದೇಶದಲ್ಲಿನ ಕೃಷಿಬೆಳೆ ಹಾನಿಗೊಂಡಿರುತ್ತದೆ. ಖಾಸಗಿ ಆಸ್ತಿ-ಪಾಸ್ತಿಗಳ ಒಟ್ಟು ಹಾನಿಯನ್ನು ರೂ. 78.95 ಕೋಟಿಗಳೆಂದು ಅಂದಾಜು ಮಾಡಲಾಗಿದೆ.

2466ಕ್ಕೂ ಮೇಲ್ಪಟ್ಟು ಸಾರ್ವಜನಿಕ ಕಟ್ಟಡಗಳು, 1027 ಸೇತುವೆಗಳು, 1535 ಸಣ್ಣ ನೀರಾವರಿ ಕೆರೆಗಳು ಮತ್ತು 161 ನೀರಾವರಿ ಕಾಲುವೆಗಳು ಹಾನಿಗೊಂಡಿವೆ, 2243 ಕಿ.ಮೀ. ನಷ್ಟ ಸಾರ್ವಜನಿಕ ರಸ್ತೆಗಳು ಹಾಗೂ 2760 ತುಂಡು ರಸ್ತೆಗಳೂ ಸಹ ಹಾನಿಗೊಂಡಿವೆ. ಅಲ್ಲದೇ, ಸಮುದ್ರ ಕೊರೆತದಿಂದ ರೂ. 5.30 ಕೋಟಿಗಳಷ್ಟು ಹಾನಿಯಾಗಿರುತ್ತದೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಆಸ್ತಿ-ಪಾಸ್ತಿಗಳಿಗೆ ರೂ. 6.16 ಕೋಟಿಗಳಷ್ಟು ಹಾನಿ ಉಂಟಾಗಿರುತ್ತದೆ. ಒಟ್ಟಾರೆ ಸಾರ್ವಜನಿಕ ಆಸ್ತಿಪಾಸ್ತಿಗಳ ಹಾನಿಯನ್ನು ರೂ. 87.51 ಕೋಟಿಗಳೆಂದು ಅಂದಾಜಿಸಲಾಗಿದೆ.

1994ರ ಆಗಸ್ಟ್ 12ರವರೆಗೆ, ಅಂದಾಜಿಸಿರುವಂತೆ ಒಟ್ಟಾರೆ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ಹಾನಿ ರೂ. 166.47 ಕೋಟಿಗಳಾಗಿರುತ್ತವೆ.

ಕೈಗೊಂಡ ರಕ್ಷಣೆ ಹಾಗೂ ಪರಿಹಾರ ಕಾರ್ಯಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ಮುಳುಗಡೆಯಾದ ಗ್ರಾಮಗಳು	ತೊಡಗಿಸಿದ್ದ ದೋಣಿಗಳು		ಪ್ರಾರಂಭಿಸಿದ್ದ ಗಂಜೀಕೇಂದ್ರ ಪರಿಹಾರ ಕೇಂದ್ರಗಳು	ಪರಿಹಾರ ಕೇಂದ್ರಗಳಲ್ಲಿದ್ದ ಸಂತ್ರಸ್ಥರು
			ಎಂಇಜಿ	ಸ್ಥಳೀಯ		
1.	ದಕ್ಷಿಣ ಕನ್ನಡ	159 (ಭಾಗಶಃ)	-	54	22	2831
2.	ಕೊಡಗು	20	3	4	16	4500
3.	ಹಾಸನ	6	-	4	2	53
4.	ಮೈಸೂರು	9	3	8	8	6007
5.	ಶಿವಮೊಗ್ಗ	25	-	2	32	7820
6.	ಬೆಳಗಾವಿ	39	-	5	25	10042
7.	ಉತ್ತರ ಕನ್ನಡ	9	-	2	4	900
8.	ಧಾರವಾಡ	33	4	2	31	8804
9.	ಚಿಕ್ಕಮಗಳೂರು	6	3	-	6	1500

10.	ಬಿಜಾಪುರ	34	4	2	23	18642
11.	ಚಿತ್ರದುರ್ಗ	7	-	-	6	2715
	ಒಟ್ಟು	347	17	83	175	63814

ರಾಜ್ಯ ಸರ್ಕಾರ ದಿನಾಂಕ 8.6.1994ರಿಂದ 23.8.1994ರವರೆಗೆ ಪ್ರವಾಹ ಪರಿಸ್ಥಿತಿಯನ್ನು ಎದುರಿಸಲು ಕೆಳಕಂಡ ಜಿಲ್ಲೆಗಳಿಗೆ ರೂ. 1015.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

	ಜಿಲ್ಲೆಯ ಹೆಸರು	ರೂ. ಲಕ್ಷಗಳಲ್ಲಿ
1.	ದಕ್ಷಿಣ ಕನ್ನಡ	160.00
2.	ಉತ್ತರ ಕನ್ನಡ	80.00
3.	ಕೊಡಗು	70.00
4.	ಶಿವಮೊಗ್ಗ	80.00
5.	ಮೈಸೂರು	40.00
6.	ಚಿಕ್ಕಮಗಳೂರು	95.00
7.	ಹಾಸನ	60.00
8.	ಬಿಜಾಪುರ	25.00
9.	ತುಮಕೂರು	5.00
10.	ಕೋಲಾರ	10.00
11.	ಬೆಳಗಾವಿ	80.00
12.	ಧಾರವಾಡ	285.00
13.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಆರೋಗ್ಯ ರಕ್ಷಣೆಗೆ	25.00
	ಒಟ್ಟು	1015.00

ಮುಂಗಾರಿನಿಂದ ರಾಜ್ಯದಲ್ಲಿ ಉಂಟಾದ ಪರಿಸ್ಥಿತಿಯ ವೀಕ್ಷಣೆಗಾಗಿ ಮಾನ್ಯ ಪ್ರಧಾನ ಮಂತ್ರಿಗಳು ಮಾನ್ಯ ರಕ್ಷಣಾ ಖಾತೆ ರಾಜ್ಯ ಸಚಿವರಾದ ಶ್ರೀ ಮಲ್ಲಿಕಾರ್ಜುನರವನ್ನು ವೈಯಕ್ತಿಕ ಪ್ರತಿನಿಧಿಯಾಗಿ ಕಳುಹಿಸಿದ್ದು; ಶ್ರೀ ಮಲ್ಲಿಕಾರ್ಜುನ್‌ರವರು ದಿನಾಂಕ ೨೦ ಮತ್ತು 21ನೇ ಜುಲೈ, 1994ರಂದು ಮಾನ್ಯ ಮುಖ್ಯಮಂತ್ರಿಯವರು, ನಾನು ಮತ್ತು ಅಧಿಕಾರಿಗಳೊಂದಿಗೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. 1994ರ ಜುಲೈ 24ರ ಸಂಜೆ, ಶ್ರೀ ಮಲ್ಲಿಕಾರ್ಜುನ್‌ರವರು ಬೆಂಗಳೂರಿನಲ್ಲಿ ಸಭೆಯೊಂದನ್ನು ಇಟ್ಟುಕೊಂಡಿದ್ದರು. ಶ್ರೀ ಸಿ.ಕೆ. ಜಾಫರ್ ಶರೀಫ್, ಮಾನ್ಯ ಕೇಂದ್ರ ರೈಲ್ವೆ ಮಂತ್ರಿಗಳೂ ಸಹ ಈ ಸಭೆಯಲ್ಲಿ ಹಾಜರಿದ್ದರು.

ರಾಜ್ಯ ಸರ್ಕಾರ ಶ್ರೀ ಮಲ್ಲಿಕಾರ್ಜುನ್‌ರವರಿಗೆ ಭಾರಿ ಮಳೆ : ಪ್ರವಾಹದಿಂದ ಆದ ಹಾನಿಯ ಬಗ್ಗೆ ವರದಿಯನ್ನು ಸಲ್ಲಿಸಿತು. ಇದರ ಹಿಂದೆಯೇ, ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಪ್ರಧಾನ ಮಂತ್ರಿಯವರಿಗೆ, ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ರೂ. 100.00 ಕೋಟಿಗಳ ಕೇಂದ್ರದ ನೆರವು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

2. ಬರ ಪರಿಸ್ಥಿತಿ :

ರಾಜ್ಯದ 12 ಜಿಲ್ಲೆಗಳಲ್ಲಿನ 72 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿಯ ಛಾಯೆ ಕಂಡು ಬಂದಿದೆ. ಜಿಲ್ಲೆಯ ಕೆಲವು ಭಾಗ ಭಾರಿ ಮಳೆ : ಪ್ರವಾಹವನ್ನು ಕಂಡಿದ್ದರೆ, ಅದೆ ಜಿಲ್ಲೆಯ ಉಳಿದ ಕೆಲವು ಭಾಗ ಬರದ ಸ್ಥಿತಿಯಲ್ಲಿರುವುದು ಒಂದು ವಿರೋಧಾಭಾಸವಾಗಿದೆ.